# ಕರ್ನಾಟಕ ಸರ್ಕಾರ

ಸಂಖ್ಯೆ:ಕಾಇ 179 ಎಲ್‌ಇಟಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 07 /05/2021.

ಇಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ,

ಜಂಟಿ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ,
ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು.

7/6/21
274

ಮಾನ್ಯರೆ,

ವಿಷಯ: 2021-22ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನಕ್ಕೆ ಸಲ್ಲಿಸಿರುವ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: ತಮ್ಮ ಪ್ರಸ್ತಾವನೆ ಸಂಖ್ಯೆ: ಅಸಂಕಾ/ಆಯವ್ಯಯ/ಕ್ರಿ.ಯೋ/ಸಿ.ಆರ್-03/2020-21, ದಿನಾಂಕ:20-04-2021.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2021-22ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಮೋದನೆಗಾಗಿ ಉಲ್ಲೇಖಿತ ಪ್ರಸ್ತಾವನೆಯಲ್ಲಿ ಕೋರಿರುತ್ತೀರಿ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಷರತ್ತಿಗೊಳಪಟ್ಟು ಕ್ರಿಯಾ ಯೋಜನೆಯನ್ನು ಅನುಮೋದಿಸಲಾಗಿದೆ ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

- ಪ್ರಸ್ತಾಪಿತ ಕ್ರಿಯಾ ಯೋಜನೆಯು ಒದಗಿಸಿರುವ ಆಯವ್ಯಯದ ಮಿತಿಯನ್ನು ಮೀರಬಾರದು.
- ಯೋಜನೆಯ ಪ್ರಗತಿಯ ವರದಿಯನ್ನು ತಪ್ಪದೇ ಪ್ರತಿ ತಿಂಗಳು ಸಲ್ಲಿಸಬೇಕು.
- ಈ ಕ್ರಿಯಾ ಯೋಜನೆಯನ್ನು ಮಂಡಳಿಯ ಸರ್ವ ಸದಸ್ಯರ ಸಭೆಯಲ್ಲಿ ಘಟನೋತ್ತರ ಅನುಮತಿಯನ್ನು ಪಡೆಯುವುದು.
- ಕ್ರಿಯಾ ಯೋಜನೆಯಲ್ಲಿ ಏನಾದರು ಬದಲಾವಣೆಗಳನ್ನು ಮಾಡುವುದಾದಲ್ಲಿ ಕಡ್ಡಾಯವಾಗಿ ಸರ್ಕಾರದ ಪೂರ್ವಾನುಮತಿಯನ್ನು ಪಡೆಯಬೇಕು.

- ಯೋಜನೆಗಳನ್ನು ಕೈಗೊಳ್ಳುವಾಗ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದಿದ್ದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ, 2000ರ ನಿಯಮಗಳಿಗನುಸಾರವಾಗಿ ಕೈಗೊಳ್ಳತಕ್ಕದ್ದು.
- ಆಯವ್ಯಯಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯು ಹೊರಡಿಸಿರುವ ಆಯವ್ಯಯ ಸಲಹಾ ಟಿಪ್ಪಣ ಸಂಖ್ಯೆ: ಆಇ 91 ವೆಚ್ಚ-9/2021, ದಿನಾಂಕ:09.04.2021ನ್ನು ಹಾಗೂ ಅರ್ಥಿಕ ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶ / ಟಿಪ್ಪಣಿಗಳಿಗೆ ಅನುಗುಣವಾಗಿ ಕ್ರಿಯಾ ಯೋಜನೆಯು ಇರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಆರ್ಥಿಕ ಇಲಾಖೆಯು ಹೊರಡಿಸುವ ಅಧಿಕಾರ ಪ್ರತ್ಯಾಯೋಜನೆಗನುಸಾರವಾಗಿ ಕ್ರಿಯಾ ಯೋಜನೆಯ ಅನುಷ್ಠಾನವನ್ನು ಕೈಗೊಳ್ಳತಕ್ಕದ್ದು.
- ಕೇಂದ್ರ ಸರ್ಕಾರ/ರಾಜ್ಯ ಸರ್ಕಾರಗಳು ಆಗಿಂದಾಗ್ಗೆ ನೀಡುವ ಸೂಚನೆಯನ್ನು ಪಾಲಿಸತಕ್ಕದ್ದು.

(ಮಾನ್ಯ ಇಲಾಖಾ ಸಚಿವರಿಂದ
ಅನುಮೋದಿಸಲ್ಪಟ್ಟಿದೆ)

ತಮ್ಮ ನಂಬುಗೆಯ,

ಪ್ರದೀಪ್ ಕುಮಾರ್

(ಪ್ರದೀಪ್ ಕುಮಾರ್ ಬಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,,
ಕಾರ್ಮಿಕ ಇಲಾಖೆ.

## ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ (ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ) (ಲೆಕ್ಕ ಶೀರ್ಷಿಕೆ 2230-01-111-0-05) ಜಾರಿಗಾಗಿ 2021-22ನೇ ಸಾಲಿನ ಕ್ರಿಯಾ ಯೋಜನೆ

## I. ಪ್ರಸ್ತಾವನೆ:

ಕೇಂದ್ರ ಸರ್ಕಾರದ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಕಲಂ 6ರನ್ವಯ ಕರ್ನಾಟಕ ರಾಜ್ಯ ಸರ್ಕಾರವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ ಒದಗಿಸಲು ಸೂಕ್ತ ಕಲ್ಯಾಣ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಲು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ದಿನಾಂಕ:05-10-2009 ರಂದು ಸ್ಥಾಪಿಸಲಾಗಿದೆ. ಮಂಡಳಿಯು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯನ್ನು ಜಾರಿಗೊಳಿಸುತ್ತಿದ್ದು, ಸದರಿ ಯೋಜನೆಯಡಿ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

### 1. ಮಂಡಳಿಯ ಆಡಳಿತಾತ್ಮಕ ವೆಚ್ಚ.

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಲ್ಲಿ ಕಾರ್ಮಿಕ ಇಲಾಖೆಯಿಂದ ನಿಯೋಜನೆಗೊಂಡ ಅಧಿಕಾರಿಗಳು, ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ನಿವೃತ್ತ ಅಧಿಕಾರಿಗಳು ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಸಿಬ್ಬಂದಿಗಳು ಸೇರಿದಂತೆ ಪ್ರಸ್ತುತ 81 ಸಿಬ್ಬಂದಿಗಳು ಸೇವೆ ಸಲ್ಲಿಸುತ್ತಿದ್ದಾರೆ. ಅವರುಗಳ ವೇತನ, ಅಧಿಕಾರಿಗಳ ಪ್ರವಾಸ ಭತ್ಯೆ, ಕಛೇರಿಯ ವಿದ್ಯುತ್ಶಕ್ತಿ, ಕಛೇರಿಯ ಬಾಡಿಗೆ, ದೂರವಾಣಿ ವೆಚ್ಚ, ಮಂಡಳಿಯ ಸರ್ವ ಸದಸ್ಯರ ಸಾಮಾನ್ಯ ಸಭೆ ಹಾಗೂ ಇತರೆ ಸಭೆಗಳ ವೆಚ್ಚ ಇತ್ಯಾದಿಗಳು ಸೇರಿದಂತೆ ಯೋಜನೆಗಳ ಅನುಷ್ಠಾನಕ್ಕಾಗಿ ತಗಲಬಹುದಾದ ಆಡಳಿತ ವೆಚ್ಚವನ್ನು ನಿರ್ವಹಿಸಬೇಕಾಗಿದೆ.

### 2. ಸ್ಮಾರ್ಟ್ ಕಾರ್ಡ್ ಸೌಲಭ್ಯ :

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008 ರ ಪ್ರಾವಧಾನಗಳನ್ವಯ, ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ, 11 ಅಸಂಘಟಿತ ವಲಯಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ಏಕ ಶೀರ್ಷಿಕೆ ಮತ್ತು ಏಕ ಚಿಹ್ನೆಯಡಿ ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದೆ.

### 3. ಶ್ರಮ ಸಮ್ಮಾನ ಪುರಸ್ಕಾರ :

ಈ ಕಾರ್ಯಕ್ರಮದಡಿ ಪ್ರತಿ ವರ್ಷ ಮಾರ್ಚ್ 01ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಮಿಕ ಸಮ್ಮಾನ ದಿನವನ್ನು ಆಚರಿಸಲಾಗುತ್ತಿದೆ. ಸದರಿ ಸಂದರ್ಭದಲ್ಲಿ ಅಸಂಘಟಿತ ವಲಯದಲ್ಲಿ ಗುರುತರ ಸೇವೆ ಸಲ್ಲಿಸಿದ ಕಾರ್ಮಿಕರನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ, 11 ವರ್ಗಗಳ ಕಾರ್ಮಿಕರಿಗೆ ಪ್ರತಿಯೊಂದು ಜಿಲ್ಲೆಗೆ ಪ್ರತಿಯೊಂದು ವಲಯಕ್ಕೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರಶಸ್ತಿ ಮತ್ತು 8 ವಿಶೇಷ ಪುರಸ್ಕಾರ ಪ್ರಶಸ್ತಿಗಳು ಸೇರಿ ಒಟ್ಟು 3630 ಕಾರ್ಮಿಕರಿಗೆ "ಶ್ರಮ ಸಮ್ಮಾನ ಪ್ರಶಸ್ತಿ" ನೀಡಿ ಗೌರವಿಸಲಾಗುತ್ತಿದೆ. ಸದರಿ ದಿನಾಚರಣೆಯನ್ನು ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಆಚರಿಸಬೇಕಾಗಿದ್ದು, ತಗಲುವ ವೆಚ್ಚವನ್ನು ಮಂಡಳಿಯಿಂದ ಭರಿಸಬೇಕಾಗುತ್ತದೆ ಹಾಗೂ ಇದಕ್ಕಾಗಿ 2021-22ನೇ ಸಾಲಿನ ವರ್ಷಾಂತ್ಯದಲ್ಲಿ ರಾಜ್ಯದ ಎಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು.

## 4. ಕಾರ್ಮಿಕ ಸೇವಾ ಕೇಂದ್ರ :

ಕಾರ್ಮಿಕ ಇಲಾಖೆ ಹಾಗೂ ಅದರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಂಡಳಿ ಹಾಗೂ ಸೊಸೈಟಿಗಳು ಜಾರಿಗೊಳಿಸುತ್ತಿರುವ ಯೋಜನೆ / ಕಾರ್ಯಕ್ರಮಗಳಡಿ ದೊರಕುವ ಸೌಲಭ್ಯಗಳ ಕುರಿತು ಫಲಾನುಭವಿಗಳಿಗೆ ಅರಿವು ಮೂಡಿಸಲು ಹಾಗೂ ಸೌಲಭ್ಯಗಳನ್ನು ಪಡೆಯಲು ಸಹಾಯ ನೀಡಲು 2018-19ನೇ ಸಾಲಿನಲ್ಲಿ ನಿರ್ಧರಿಸಿದಂತೆ, ರಾಜ್ಯದ ಈಗಾಗಲೇ 169 ತಾಲ್ಲೂಕುಗಳಲ್ಲಿ ಕಾರ್ಮಿಕ ಸೇವಾ ಕೇಂದ್ರಗಳನ್ನು ಮಂಡಳಿಯ ವತಿಯಿಂದ ತೆರೆಯಲಾಗಿದೆ. ಸದರಿ ಕಾರ್ಮಿಕ ಸೇವಾ ಕೇಂದ್ರಗಳಿಗೆ ತಗಲುವ ಕಟ್ಟಡ ಬಾಡಿಗೆ, ವಿದ್ಯುತ್ಶಕ್ತಿ ವೆಚ್ಚ, ದೂರವಾಣಿ ವೆಚ್ಚ ಇತ್ಯಾದಿ ಖರ್ಚು-ವೆಚ್ಚಗಳನ್ನು ಮಂಡಳಿಯೇ ಭರಿಸಬೇಕಾಗಿದೆ.

## 5. ಕಾರ್ಮಿಕ ಬಂಧುಗಳಿಗೆ ಕಮಿಷನ್ :

ಮಂಡಳಿಯಿಂದ ಸ್ಥಾಪಿಸಲ್ಪಡುವ ಕಾರ್ಮಿಕ ಸೇವಾ ಕೇಂದ್ರಗಳಲ್ಲಿ, ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೇಮಕಗೊಂಡ ಕಾರ್ಮಿಕ ಬಂಧುಗಳು ಕಾರ್ಯ ನಿರ್ವಹಿಸುತ್ತಿದ್ದು, ಕಾರ್ಮಿಕ ಇಲಾಖೆ ಹಾಗೂ ಅದರ ಅಧಿನದಲ್ಲಿ ಬರುವ ಮಂಡಳಿಗಳು ಜಾರಿಗೊಳಿಸುತ್ತಿರುವ ಯೋಜನೆಗಳ ಸೌಲಭ್ಯಗಳನ್ನು ಫಲಾನುಭವಿಗಳು ಪಡೆಯಲು ಸಹಾಯ ಮಾಡಬೇಕಾಗಿದ್ದು, ಅವರುಗಳು ಕಮಿಷನ್ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ಅದೇ ರೀತಿ, ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆಗಳ ಸೌಲಭ್ಯವನ್ನು ಪಡೆಯಲು ಸಹಾಯ ನೀಡಿದ ಕಾರ್ಮಿಕ ಬಂಧುಗಳಿಗೆ ಕಮಿಷನ್ ನೀಡಲಾಗುತ್ತಿದೆ.

## 6. ಮಹಿಳಾ ಅಸಂಘಟಿತ ಕಾರ್ಮಿಕರಿಗೆ ಸ್ವ-ಉದ್ಯೋಗ ಕಲ್ಪಿಸಿಕೊಳ್ಳುವ ಬಗ್ಗೆ ಅರಿವು ಕಾರ್ಯಕ್ರಮ:

ಮಹಿಳಾ ಅಸಂಘಟಿತ ಕಾರ್ಮಿಕರನ್ನು ಆರ್ಥಿಕವಾಗಿ ಸಧೃಡಗೊಳಿಸುವ ಉದ್ದೇಶದಿಂದ ಅವರಲ್ಲಿ ಅಡಗಿರುವ ನೈಪುಣ್ಯತೆಯನ್ನು ಗುರುತಿಸಿ ಸ್ವ-ಉದ್ಯೋಗವನ್ನು ಸೃಷ್ಟಿಸಿಕೊಳ್ಳುವ ಮೂಲಕ ಅವರ ಜೀವನೋಪಾಯಕ್ಕೆ ದಾರಿಮಾಡಿಕೊಡುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಮಹಿಳಾ ಅಸಂಘಟಿತ ಕಾರ್ಮಿಕರಿಗೆ ವಿವಿಧ ವೃತ್ತಿಗಳ ಕುರಿತಾಗಿ ತಜ್ಞರಿಂದ ತರಬೇತಿ/ಅರಿವು ಕಾರ್ಯಕ್ರಮವನ್ನು ಏರ್ಪಡಿಸುವುದು.

## 7. ಅಂತರಾಷ್ಟ್ರೀಯ ವಿದೇಶಿ ಕೋಶ :

ಪ್ರತಿ ವರ್ಷ ರಾಜ್ಯದಾದ್ಯಂತ ಪರಿಣಿತ, ಅರೆಪರಿಣಿತ ಹಾಗೂ ಪರಿಣಿತರಲ್ಲದ ಸಹಸ್ರಾರು ಕಾರ್ಮಿಕರು ಉದ್ಯೋಗಕ್ಕಾಗಿ ವಿದೇಶಗಳಿಗೆ ತೆರಳುತ್ತಿದ್ದು, ಮಧ್ಯವರ್ತಿ ಸಂಸ್ಥೆಗಳಿಂದ ಶೋಷಣೆಗೆ ಒಳಗಾಗುತ್ತಿರುವುದನ್ನು ಗಮನಿಸಿ ಅವರ ಹಿತರಕ್ಷಣೆಗಾಗಿ ರಾಜ್ಯ ಸರ್ಕಾರವು ರಾಜ್ಯದಲ್ಲಿ ವಿದೇಶಿ ಉದ್ಯೋಗ ಕೋಶ (International Migration Centre-Karnataka(IMCK) ವನ್ನು ಸ್ಥಾಪಿಸಲು 2018-19ನೇ ಸಾಲಿನಲ್ಲಿ ನಿರ್ಧರಿಸಿದ್ದು, ಅರೆಪರಿಣಿತ ಹಾಗೂ ಪರಿಣಿತರಲ್ಲದ ಕಾರ್ಮಿಕರಿಗೆ ಸಂಬಂಧಪಟ್ಟ ಹೊಣೆಯನ್ನು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ವಹಿಸಿದೆ.

ಈ ದಿಸೆಯಲ್ಲಿ, ಭಾರತ ಸರ್ಕಾರದ ವಿದೇಶಾಂಗ ಮಂತ್ರಾಲಯವು ಮಂಡಳಿಯನ್ನು ನೋಂದಣಿ ಸಂಸ್ಥೆಯಾಗಿ ನೇಮಕಾತಿ ಮಾಡಿರುತ್ತದೆ. ಸದರಿ ಉದ್ದೇಶಕ್ಕಾಗಿ ವಿಶೇಷ ಪರಿಣಿತಿ ಹೊಂದಿದ ಸಿಬ್ಬಂದಿಗಳ ಅವಶ್ಯಕತೆ ಇದ್ದು, ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

**8. ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳು:**

ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆಯಡಿ ದೊರಕುವ ಸೌಲಭ್ಯಗಳ ಕುರಿತು ಅಸಂಘಟಿತ ಕಾರ್ಮಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಕರಪತ್ರಗಳ ಮುದ್ರಣ, ಬ್ಯಾನರ್, ಹೋರ್ಡಿಂಗ್ಸ್‌ಗಳ ಅಳವಡಿಕೆ, ವೃತ್ತ ಪತ್ರಿಕೆಗಳಲ್ಲಿ ಜಾಹೀರಾತು, ಲಭ್ಯವಿರುವ ಎಲ್ಲಾ ಮಾಧ್ಯಮಗಳ ಮೂಲಕ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

## II. ಯೋಜನೆಗೆ ಆಯವ್ಯಯ:

ಮಂಡಳಿಯ ಆಡಳಿತಾತ್ಮಕ ವೆಚ್ಚಕ್ಕಾಗಿ ಪ್ರತಿ ವರ್ಷವು ರಾಜ್ಯ ಸರ್ಕಾರವು ಲೆಕ್ಕ ಶೀರ್ಷಿಕೆ: 2230-01-111-0-05ಯಡಿ ಅನುದಾನವನ್ನು ಹಂಚಿಕೆ ಮಾಡುತ್ತಿದೆ. 2017-18ನೇ ಸಾಲಿನಿಂದ ಪ್ರಾರಂಭಿಸಲಾದ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯ ಜಾರಿಗಾಗಿ ನಿಗದಿಪಡಿಸಿರುವ ಅನುದಾನವನ್ನು ಸೇರಿಸಿ ಸರ್ಕಾರವು ಸದರಿ ಲೆಕ್ಕಶೀರ್ಷಿಕೆಯಡಿ ಹಂಚಿಕೆ ಮಾಡುತ್ತಿದೆ. 2021-22ನೇ ಸಾಲಿನಲ್ಲಿ ಈ ಲೆಕ್ಕ ಶೀರ್ಷಿಕೆಯಡಿ ರೂ.500.00 ಲಕ್ಷಗಳನ್ನು ಹಂಚಿಕೆ ಮಾಡಿರುತ್ತದೆ.

ಯೋಜನೆಯ ಜಾರಿಗೆ ಹಿಂದಿನ ಸಾಲುಗಳಲ್ಲಿ ಬಿಡುಗಡೆಗೊಳಿಸಿದ ಅನುದಾನದಲ್ಲಿ ಮಾರ್ಚ್-2021ರ ಅಂತ್ಯಕ್ಕೆ ಬಡ್ಡಿಯು ಸೇರಿದಂತೆ ಒಟ್ಟು ರೂ.300.56 ಲಕ್ಷಗಳು (ನೋಂದಣಿ ಶುಲ್ಕ ಮತ್ತು ಪಿ.ಎಂ.ಎಸ್.ವೈ.ಎಂ ಅನುದಾನ ಹೊರತುಪಡಿಸಿ) ಬಾಕಿಯಿದ್ದು, 2021-22ನೇ ಸಾಲಿಗೆ ಹಂಚಿಕೆಯಾದ ರೂ. 500.00 ಲಕ್ಷಗಳು ಸೇರಿದಂತೆ ಲಭ್ಯವಿರುವ ಅನುದಾನದ ಒಟ್ಟು ಮೊತ್ತವು **ರೂ.800.56** ಲಕ್ಷಗಳು ಆಗುತ್ತಿದ್ದು, ಸದರಿ ಅನುದಾನವನ್ನು ಈ ಕೆಳಕಂಡ ಉದ್ದೇಶಗಳಿಗೆ ಬಳಸಿಕೊಳ್ಳಲು ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ.

| ಕ್ರ.ಸಂ. | ಸೌಲಭ್ಯಗಳ ವಿವರ | ಫಲಾನುಭವಿಗಳ ಸಂಖ್ಯೆ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 01 | ಅಧಿಕಾರಿಗಳ ಮತ್ತು ಸಿಬ್ಬಂದಿಗಳ ವೇತನ/ಮಂಡಳಿಯ ಆಡಳಿತಾತ್ಮಕ ವೆಚ್ಚ | 81 | 325 |
| 02 | ಅಸಂಘಟಿತ ಕಾರ್ಮಿಕರ ನೋಂದಣಿ ಹಾಗೂ ಸ್ಮಾರ್ಟ್ ಕಾರ್ಡ್ ವಿತರಣೆ | 50,000 | 50 |
| 03 | ಶ್ರಮ ಸಮ್ಮಾನ ಪುರಸ್ಕಾರ | 3630 | 250 |
| 04 | ಕಾರ್ಮಿಕ ಸೇವಾ ಕೇಂದ್ರಗಳ ನಿರ್ವಹಣೆ (169 ಕೇಂದ್ರಗಳು) | - | 50 |
| 05 | ಕಾರ್ಮಿಕ ಬಂಧುಗಳ ಕಮಿಷನ್ | 500 | 15 |
| 06 | ಮಹಿಳಾ ಅಸಂಘಟಿತ ಕಾರ್ಮಿಕರಿಗೆ ಸ್ವ-ಉದ್ಯೋಗ ಕಲ್ಪಿಸಿಕೊಳ್ಳುವ ಬಗ್ಗೆ ಅರಿವು ಕಾರ್ಯಕ್ರಮ | - | 31 |
| 07 | ಅಂತರಾಷ್ಟ್ರೀಯ ವಿದೇಶಿ ಉದ್ಯೋಗ ಕೋಶ | 150 | 10 |
| 08 | ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳು | - | 69.56 |
| | | ಒಟ್ಟು | **800.56** |

******

S. B. (signature)

ಜಂಟಿ ಕಾರ್ಯದರ್ಶಿ

ಕರ್ನಾಟಕ ರಾಜ್ಯ ಅಸಂಘಟಿತ ಕಾ

ಸಾಮಾಜಿಕ ಭದ್ರತಾ ಮಂಡಳಿ, ಬೆ